/643879/2024

ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: DTE-ADMIOEST(4)/13/2024 /625

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 22.07.2024

**ಅಧಿಕೃತ ಜ್ಞಾಪನ**

**ವಿಷಯ:** ದತ್ತಾಂಶ ನಮೂದು ಸಹಾಯಕ ಹುದ್ದೆಯಿಂದ ಶೀಘ್ರಲಿಪಿಗಾರರ ಹುದ್ದೆಗೆ ನೀಡಿರುವ ಮುಂಬಡ್ತಿಯನ್ನು ಹಿಂಪಡೆಯುವ ಕುರಿತು.

**ಉಲ್ಲೇಖ:** 1. ತಾಂತ್ರಿಕ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ:DTE-ADMIOEST(4)13/2024/1534, ದಿನಾಂಕ: 14.03.2024.

2. ಶ್ರೀಮತಿ ಭಾಗ್ಯ ಡಿ.ಕೆ., ದತ್ತಾಂಶ ನಮೂದು ಸಹಾಯಕರು, ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಭದ್ರಾವತಿ ಇವರ ಮನವಿ ದಿನಾಂಕ: 04.04.2024 ರ ಮೇರೆಗೆ

*****

ಉಲ್ಲೇಖ(1) ರ ಆದೇಶದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಉಳಿದ ಮೂಲ ವೃಂದದಲ್ಲಿ ಖಾಲಿಯಿದ್ದ ಗ್ರೂಪ್-ಸಿ ವೃಂದದ ವೇತನ ಶ್ರೇಣಿ ರೂ. 27650-52650 ರಲ್ಲಿನ ಶೀಘ್ರಲಿಪಿಗಾರರ ಹುದ್ದೆಗೆ ದತ್ತಾಂಶ ನಮೂದು ಸಹಾಯಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅರ್ಹ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡಿ ಸ್ಥಳನಿಯುಕ್ತಿಗೊಳಿಸಿ ಆದೇಶಿಸಲಾಗಿತ್ತು. ಉಲ್ಲೇಖ(2) ರಂತೆ ಕೆಳಕಂಡ ಸಿಬ್ಬಂದಿಯು ಕೌಟುಂಬಿಕ ಕಾರಣಗಳ ನಿಮಿತ್ತ ಮುಂಬಡ್ತಿ ನಿರಾಕರಿಸಿ ಮನವಿ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ಸಿಬ್ಬಂದಿಗೆ ಶೀಘ್ರಲಿಪಿಗಾರರ ಹುದ್ದೆಗೆ ನೀಡಿರುವ ಮುಂಬಡ್ತಿಯನ್ನು ಕರ್ನಾಟಕ ನಾಗರೀಕ ಸೇವೆ (ಸಾಮಾನ್ಯ ನೇಮಕಾತಿ) ನಿಯಮಾವಳಿ, 1977 ರ ನಿಯಮ 4(ಎ) ರಂತೆ ಹಿಂಪಡೆಯಲಾಗಿದೆ.

| ಮುಂಬಡ್ತಿ ಆದೇಶದ ಕ್ರಮಾಂಕ | ದತ್ತಾಂಶ ನಮೂದು ಸಹಾಯಕರ ಹೆಸರು ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಸಂಸ್ಥೆಯ ಹೆಸರು | ಶೀಘ್ರಲಿಪಿಗಾರರ ಹುದ್ದೆಗೆ ಮುಂಬಡ್ತಿ ನೀಡಿ ಸ್ಥಳನಿಯುಕ್ತಿಗೊಳಿಸಲಾಗಿದ್ದ ಸಂಸ್ಥೆ |
|---|---|---|
| 4 | ಭಾಗ್ಯ ಡಿ.ಕೆ.<br>ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಭದ್ರಾವತಿ | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾವೇರಿ |

"ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"

Signed by
Prasanna H
Date: 23-07-2024 14:55:48

ನಿರ್ದೇಶಕರು,

/643879/2024

ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು

ಇವರಿಗೆ:-

1. ಸಂಬಂಧಪಟ್ಟ ದತ್ತಾಂಶ ನಮೂದು ಸಹಾಯಕರಿಗೆ (ಸಂಬಂಧಿಸಿದ ಪ್ರಾಂಶುಪಾಲರ ಮೂಲಕ);
2. ಸಂಬಂಧಪಟ್ಟ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು / ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರುಗಳಿಗೆ - ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ;
3. ನೋಡಲ್ ಅಧಿಕಾರಿ, ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು(ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು).

ಪ್ರತಿ:-

1. ಆಪ್ತಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
2. ಶಾಖಾ ರಕ್ಷಾ ಕಡತ.